ಮೈಸೂರ ಗೆಜೆಟ್ಟ

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮೇ ತಾ 10, ಸ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬ್ಯೈ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯೂಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗಿರುವರ್ಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 2. ತಾರೀಖು 1ನೇ ಮೇ 1884.

ಸಮಸ್ತ ಜನಗಳ ತಿಳುವಳಿಕೆ ಬ್ಯೈ ಇದರಿಂದ ಪ್ರಕಟಪಡಿಸುವದೇನಂದರೆ, ಇನ್ನು ಮೇಲೆ ಬ್ರಿಟಿಷ್ ಇಂಡ್ಯದೇಶದಿಂದ ಮೈಸೂರು ದೇಶಕ್ಕೆ ಆಯುಧ ವ ಯುದ್ಧ ಸಾಮಗ್ರಿಗಳನ್ನು ರಫ್ತು ಮಾಡುವದಕ್ಕೋಸ್ಕರ ಲೈಸೆನ್ಸ್ ಬ್ಯೈ ಮೈಸೂರು ದೇಶದ ರೆಸಿಡೆಂಟರವರಿಗೆ ಬರೆಯಲ್ಪಡುವ ದರಖಾಸ್ತುಗಳು, ಇದುವರಿಗೆ ಜಾರೀಲಿಯಿದಂತೆ ಮೈಸೂರು ಛಾಪಾ ಕಾಗದದ ಮೇಲೆ ಬರೆಯುವದಕ್ಕೆ ಬದಲಾಗಿ, ಬ್ರಿಟಿಷ್ ಇಂಡ್ಯದೇಶದ ಐದು ರೂಪಾಯಿಗಳ ಬೆಲೆಯುಳ್ಳ ಛಾಪಾ ಕಾಗದ್ದ ಮೇಲೆ ಬರೆಯಲ್ಪಡತಕ್ಕದ್ದು.

2. ಪ್ರತಿ ದರಖಾಸ್ತಿನ ಸಂಗಡಲೂ, ಆಯುಧ ಯಾ ಯುದ್ಧ ಸಾಮಗ್ರಿಗಳು ಮೈಸೂರು ದೇಶದ ಯಾವ ಡಿಸ್ಟ್ರಿಕ್ಟಿಗೆ ಆಮದ್ ಮಾಡಲ್ಪಡತಕ್ಕದ್ದೋ ಆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ, ದರಖಾಸ್ತುದಾರನ ಖಾಯಿಷ್ ಪ್ರಕಾರ ಲೈಸೆನ್ಸ್ ಕೊಡುವ ಬಗ್ಗೆ ಹರಕತ್ತಿಲ್ಲ ವೆಂಬದಾಗಿ ನಮೂದ್ ಮಾಡಲ್ಪಟ್ಟ ಬಂದು ಲೆಟರ್ ಯಾ ಸರ್ಟಿಫಿಕೇಟ್ ಆಗಲಿ ಇಳುಹಿಸಲ್ಪಡತಕ್ಕದ್ದು.

ಹುಕ್ಕುಂ ಬಮೋಜೇಬ,
ಸೆಬ್. ವೈಲಿ, ಮೇಜರ್,
ರೆಸಿಡೆಂಟರ ಅಸಿಸ್ಟೆಂಟ್.

ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 50. ತಾರೀಖು 19ನೇ ಏಪ್ರೆಲ್ 1884.

ಸಮಸ್ತ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮಾಜಿ ಅರಕಲ್‌ಗೂಡು ತಾಲ್ಲೂಕಿನ ಭಾಗವಾಗಿದ್ದು ಈಚಿಗೆ ಮೈಸೂರು ಡಿಸ್ಟ್ರಿಕ್ಟಿನ ಯಡತೊರೆ ತಾಲ್ಲೂಕಿಗೆ ವರ್ಗವಾಡಲ್ಪಟ್ಟಿರುವ 78 ಸರಕಾರೀ ಗ್ರಾಮಗಳ ರಿವಿನ್ಯೂ ಸರ್ವೆ ಜಮಾಬಂದಿಯು, 1884ನೇ ಇಸವಿ ಮೇ ಗುರ್ಯಿಗೆ, ಯಾ ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ನಂಬರ್ 78. ತಾರೀಖು 6ನೇ ನೂಹೆ ಮೇ 1884.

ಸಮಸ್ತ ಜನಗಳಿಗೂ ತಿಳಿಯುವಂಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಡಿ ಕಂಡ ಸರಕಾರ ಗ್ರಾಮಗಳ ರೆವಿನ್ಯೂ ಸರ್ವೆ ಜಮಾಬಂದಿಯು, ಇದೇ ತಿಂಗಳ 19ನೇ ತಾರೀಖಿನಲ್ಲಿ ಯಾ ಆಮೇಲೆ ಹಾರಂಭಿಸಲ್ಪಡುತ್ತೆ.

ಚನ್ನರಾಯಪಟ್ಟಣ ಬಾಬತು ಗ್ರಾಮಗಳು	390	ಅತ್ತಿಕುಪ್ಪೆ ಬಾಬತು ಗ್ರಾಮಗಳು ..	2
ಅರಕೀಕೆರೆ ಬಾಬತು ಗ್ರಾಮಗಳು ..	18		

ಜೆ. ಪಿ. ಗ್ಯಾಂಟ್,
ಸೂ॥ ರೆ॥ ಸರ್ವೆ ಮತ್ತು ಸೆಟಲ್‌ಮೆಂಟ್, ಮೈಸೂರ್.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ಹೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಲೋಕಲ್ ಫಾಜಿನ ನವಕರರಿಂದ ಪಾವತೀ ಮಾಡಲ್ಪಡುವ ಕಂದಾಯ.

ಡಿಸ್ಟ್ರಿಕ್ಟ ಜಾತ ಡೆಪ್ಯುಟಿ ಕಮ್ಮಿಷನರ್‌ಗಳಿಗೆ—ಸರ್ಕ್ಯುಲರ್ ನಂ. 1586, ತಾರಿಖು 1ನೇ ಮೇ 1884.

ಈ ಆಫೀಸು 1884ನೇ ಇಸವಿ ಫಿಬ್ರವರೀ 29ನೇ ಮಕ್ಕಂ 1576ನೇ ನಂಬರ್ ಸರಕ್ಯುಲರ್ ಅನುಸರಿಸಿ, ಅಮಲ್‌ದಾರುಗಳು ಕೇಳಿ ಕೊಳ್ಳಲ್ಪಡುವದೇನಂದರೆ, ಕಂದಾಯದ ಬಾಬತು ಮೊಬಲಗು ಜಾಸ್ತಿ ಆದ ವಡನೇ ಪಾವತೀ ಮಾಡಿದ ಇಸಮಿನ ಹೆಸರು ದೇಖೀಲ್ ಇತರ ಅವಶ್ಯಕವಾದ ತಪಶೀಲ್ ಕಂಡ ವಂದು ಅಡ್ವೈಸನ್ನು ಸಂಬಂಧಪಟ್ಟ ತಾಲ್ಲೂಕು ಅಮಲ್‌ದಾರ್‌ಗೆ ಕಳುಹಿಸಿಕೊಡತಕ್ಕದ್ದು.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ನಂದೀದುರ್ಗ ಡಿವೀರ್ಜ.

ನಂದೀದುರ್ಗ ಡಿವೀರ್ಜ ಡಿಸ್ಟ್ರಿಕ್ಟ ಜಡ್ಜ್‌ರಯವರ ಕೋರ್ಟಿನಲ್ಲಿ.

ಕದರಂಣನ ಮಗ ದೊಡ್ಡನರಸುಪ್ಪನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ವ್ಯಾಜ್ಯದ ನಂಬರಿ 78.

ಹುಕ್ಕುಂ.

ಮೇಲ್ಕಂಡ ದೊಡ್ಡನರಸುಪ್ಪನು ಖಿಲಾಸೇಯಾಗಬೇಕಂದು ಕೋರಿ ಬರಡುಕೊಂಡ ಅರ್ಜೀಯು ಟಿ. ಆರ್. ಯೆ. ತಂಬುಚಟ್ಟಿಯಾರ್, ಡಿಸ್ಟ್ರಿಕ್ಟ ಜಡ್ಜ್‌ರಯವರ ರೂಬರೂ ಅರ್ಜೀದಾರನ ಪರವಾಗಿ ಯಿವನ ಸವಾಲ್ಪವುದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೀದಾರರಾದ ವೆಂಕಟಸಾಮಿ ವಗೈರೇರ ಗೈರ್ ಹಾಜರ್, ದರ್ಯಾಫ್ತ್ ಮಾಡಲ್ಪಟ್ಟಿತು.